**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 25-09-2023.**

**ಮುಂದುವರೆದ ಪಾಟೀ ಸವಾಲು - ಪ್ರತಿವಾದಿಯ ಪರ ವಕೀಲರಿಂದ :**

**5)** 1977 ರ ಹಿಂದಿನ ಮತ್ತು ಆನಂತರದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ಬಗ್ಗೆ ಇ.ಸಿ., ಮ್ಯುಟೇಶನ್ ಮತ್ತು ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ನಿಶಾನೀಕರಿಸಿದ ದಾಖಲೆಗಳಲ್ಲಿ ನಾನು ಹೇಳಿದ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. 1977 ರ ಹಿಂದಿನ ದಾಖಲೆಗಳನ್ನು ನೀಡಿರುವುದಿಲ್ಲ, 1977 ರ ನಂತರದ ದಾಖಲೆಗಳು ತಾಲ್ಲೂಕು ಕಛೇರಿಯಲ್ಲಿ ಇರಬಹುದು. 1977 ರಿಂದ 1994 ರ ವರೆಗಿನ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಆದರೆ ಹಾಜರುಪಡಿಸುತ್ತೇನೆ. ನನಗೆ ಈಗ ದಾವಾ ಸ್ವತ್ತಿನ 1968-69 ನೇ ಸಾಲಿನಿಂದ 1990-91 ನೇ ಸಾಲಿನವರೆಗಿನ ಪಹಣಿ ಪತ್ರಿಕೆಗಳನ್ನು ತೋರಿಸಿದ್ದು, ಸದರಿ ಐದು ಪಹಣಿ ಪತ್ರಿಕೆಗಳಲ್ಲಿ ನಾರಾಯಣಗೌಡ ಅವರ ಹೆಸರು ಇರುವುದನ್ನು ಒಪ್ಪಿಕೊಂಡು **ನಿ.ಡಿ.2 ರಿಂದ ನಿ.ಡಿ.6** ಎಂದು ಗುರುತಿಸಲಾಯಿತು. ನಾನು ನ್ಯಾಯಾಲಯಕ್ಕೆ ಮರೆಮಾಚಿ ಸದರಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ಆದೇಶದ ಮೇರೆಗೆ ನಮ್ಮ ತಂದೆಯ ಹೆಸರಿಗೆ ಮ್ಯುಟೇಶನ್ ಆಯಿತು ಎಂದು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಎಂ.ಆರ್.ಸಂಖ್ಯೆ 1/1996-97 ರ ರ ಆದೇಶವನ್ನು ಹಾಜರುಪಡಿಸಿರುತ್ತೇನೆ. ಆ ರೀತಿ ಯಾವುದೇ ಮ್ಯುಟೇಶನ್ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಂಪ್ಯೂಟರ್ ಪಹಣಿ ಮೊಟ್ಟ ಮೊದಲಿಗೆ 2000 ನೇ ಇಸವಿಯಲ್ಲಿ ಬಂದಿರುತ್ತದೆ ಎಂದೆ ಸರಿ. ನಮ್ಮ ಸ್ವತ್ತಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಗಳನ್ನು ಪ್ರತೀ ವರ್ಷ ಪರಿಶೀಲಿಸುತ್ತೇನೆ ಹಾಗೂ ಪಡೆದುಕೊಳ್ಳುತ್ತೇನೆ ಎಂದರೆ ಸರಿ. 2000 ದಿಂದ 2006 ರ ವರೆಗೆ ಪಹಣಿ ಪತ್ರಿಕೆ ತಿದ್ದುಪಡಿಗೆ ಹಾಕಲು ಯಾರೂ ಇರಲಿಲ್ಲ. ನಾನು ದಾವಾ ಸ್ವತ್ತನ್ನು ಸಾಗುವಳಿ

ಮಾಡಿರುವ ಬಗ್ಗೆ ಹಿಡುವಳಿ ಪತ್ರ, ಇ.ಸಿ., ಮ್ಯುಟೇಶನ್, ಪಹಣಿ ಮತ್ತು ಕಂದಾಯ ರಶೀದಿ ಹಾಜರುಪಡಿಸಿರುತ್ತೇನೆ. ನಾನು ಪಹಣಿಯ ಹೊರತಾಗಿ ಬೇರೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1977 ರಿಂದ 1996 ರ ಮಧ್ಯದಲ್ಲಿ ನಮ್ಮ ತಂದೆಯ ಹೆಸರಿಗೆ ಖಾತೆ ಮಾಡಿಕೊಡಿ ಎಂದು ತಾಲ್ಲೂಕು ಕಛೇರಿಯಲ್ಲಿ ಅರ್ಜಿ ಹಾಕಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ 1 ಮತ್ತು 2 ನೇ ಪ್ರತಿವಾದಿಗಳ ತಾತ ವಿ. ನಾರಾಯಣಗೌಡ ಗೊತ್ತು. ಅವರಿಗೆ ಮೂರು ಜನ ಗಂಡು ಮಕ್ಕಳು ಎಂದರೆ ಸರಿ. ದಾವಾ ಸರ್ವೆ ಸಂಖ್ಯೆ 32-14 ರಲ್ಲಿ ಪೂರ್ತಿ ಆಸ್ತಿ 7 ಎಕರೆ ವಿ. ನಾರಾಯಣಗೌಡರದ್ದು ಎಂದರೆ ಹೌದು, ಅದರಲ್ಲಿ 1 ಎಕರೆ ನಮ್ಮದು ಎಂದು ನುಡಿಯುತ್ತೇನೆ. ಸಾಕ್ಷಿಯು 7 ಎಕರೆಯಲ್ಲಿ 1 ಎಕರೆ ನಮ್ಮದು ಎಂದು ಪುನಃ ನುಡಿಯುತ್ತಾರೆ. ನಮ್ಮ ಪಿತ್ರಾರ್ಜಿತ ಆಸ್ತಿ ಎನ್ನಲು ಮೂಲ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. 1977 ರ ಕ್ರಯಪತ್ರದ ಹೊರತಾಗಿ ಬೇರೆ ಯಾವುದೇ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಿ. ನಾರಾಯಣಗೌಡ ಅವರ ಕುಟುಂಬದಲ್ಲಿ 1974 ರಲ್ಲಿ ವಿಭಾಗ ಆಗಿದ್ದು, ಆ ಸಮಯದಲ್ಲಿ ದಾವಾ ಸರ್ವೆ ಸಂಖ್ಯೆ 7 ಎಕರೆ ಜಮೀನು ವಿ. ನಾರಾಯಣಸ್ವಾಮಿಯವರ ಹಿಸ್ಸೆಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. 1 ಎಕರೆ ನಮ್ಮದು ಎಂದು ನುಡಿಯುತ್ತೇನೆ. ಹಾಗೆ ಉಳಿಸಿಕೊಂಡ 7 ಎಕರೆ ಜಮಿನಿನಲ್ಲಿ 1997 ರಲ್ಲಿ 1 ಮತ್ತು 2 ನೇ ಪ್ರತಿವಾದಿಗೆ ವಿಲ್ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಿ. ನಾರಾಯಣಗೌಡ ಅವರು 1998 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಗೊತ್ತಿಲ್ಲ, ಆದರೆ ಮರಣ ಹೊಂದಿರುತ್ತಾರೆ. ಅವರು ತೀರಿಹೋದ ನಂತರ 1 ಮತ್ತು 2 ನೇ ಪ್ರತಿವಾದಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಪ್ರೊಬೇಟ್ ಪಡೆದು ಅದರ ಆಧಾರದ ಮೇಲೆ ಪೂರ್ಣ 7 ಎಕರೆಗೆ 1 ಮತ್ತು 2 ನೇ ಪ್ರತಿವಾದಿಗಳ ಹೆಸರಿನಲ್ಲಿ ಖಾತೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2008-09 ನೇ ಸಾಲಿನಿಂದ 2020-21 ನೇ

ಸಾಲಿನವರೆಗಿನ ದಾವಾ ಸರ್ವೆ ಸಂಖ್ಯೆ ಪಹಣಿ ಪತ್ರಿಕೆಗಳನ್ನು ನೋಡುತ್ತಿದ್ದು, ಪೂರ್ಣ 7 ಎಕರೆಗೆ 1 ಮತ್ತು 2 ನೇ ಪ್ರತಿವಾದಿಗಳ ಹೆಸರು ನಮೂದು ಇರುವುದನ್ನು ಒಪ್ಪಿಕೊಂಡು ಅವುಗಳನ್ನು - **ನಿ.ಡಿ.7 ರಿಂದ ನಿ.ಡಿ.18** ಎಂದು ಗುರುತಿಸಲಾಯಿತು. 2007-08 ನೇ ಸಾಲಿನಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ಭೂ ಸ್ವಾಧೀನ ಆಗಿ ನೋಟೀಸು ಬಂದಿರುತ್ತದೆ ಎಂದು ನಾನು ಸ್ವತಃ ನುಡಿಯುತ್ತೇನೆ. 2008-09 ರಲ್ಲಿ ಪ್ರತಿವಾದಿಗಳ ಹೆಸರಿರನಲ್ಲಿ ಖಾತೆಯಾಗಿರುವುದಕನ್ನು ಈ ದಾವೆಯ ಹೊರತಾಗಿ ನಾನು ಬೇರೆ ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ದಾವಾ ಸರ್ವೆ ಸಂಖ್ಯೆಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಹಾಗೂ ದಾವಾ ಸ್ವತ್ತಿನ ಸ್ವಾಧೀನವನ್ನು ನಾನು ಯಾವತ್ತೂ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಆದಾಗ್ಯೂ ಸಹ ನಾರಾಯಣಪ್ಪ ಎಂಬ ಹೆಸರನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**